ಹೊಸ ಪಶು ಚಿಕಿತ್ಸಾಲಯಗಳ ಸ್ಥಾಪನೆ

416(727) ಶ್ರೀ ಬಣಕಾರ ಯು. ಬಿ. (ಹಿರೇಕೆರೂರು)

ಅ) ಹಿರೇಕೆರೂರು ವಿಧಾನ ಸಭಾ ಕ್ಷೇತ್ರದಲ್ಲಿ ಅಗತ್ಯ ಸಂಖ್ಯೆಯ ಪಶು ಚಿಕಿತ್ಸಾಲಯಗಳ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಪಶು ಚಿಕಿತ್ಸಾಲಯಗಳ ಸ್ಥಾಪನೆಗೆ ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಟಿ.ಬಿ ಜಯಚಂದ್ರ (ಕಾನೂನು ನ್ಯಾಯ ಮತ್ತು ಮಾನವಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಹಾಗೂ ಪಶುಸಂಗೋಪನಾ ಸಚಿವರು)

ಅ) ಹಿರೇಕೆರೂರು ವಿಧಾನಸಭಾ ಕ್ಷೇತ್ರದಲ್ಲಿ ಪಶುಚಿಕಿತ್ಸಾಲಯಗಳ ಕೊರತೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಸರ್ಕಾರಿ ವಕೀಲರ ಕರ್ತವ್ಯದ ಲೋಪ

417(728) ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು)

ಅ) ಕರ್ನಾಟಕ ಉಚ್ಚ ನ್ಯಾಯಲಯದಲ್ಲಿ ಸರ್ಕಾರಿ ವಕೀಲರು ಸರಿಯಾಗಿ ಸರ್ಕಾರದ ಪರ ಕೇಸುಗಳನ್ನು ನಡೆಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರಿ ವಕೀಲರು ನಡೆಸುವ ಕೇಸುಗಳನ್ನು ಮೌಲ್ಯಮಾಪನ ಮಾಡುವ ಬಗ್ಗೆ ಸರ್ಕಾರ ವಿಚಾರ ಮಾಡಲಿದೆಯೇ?

ಶ್ರೀ ಟಿ.ಬಿ ಜಯಚಂದ್ರ (ಕಾನೂನು ನ್ಯಾಯ ಮತ್ತು ಮಾನವಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಹಾಗೂ ಪಶುಸಂಗೋಪನಾ ಸಚಿವರು)

ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಅ) ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರಿ ವಕೀಲರು ಸರ್ಕಾರದ ಪರ ಕೇಸುಗಳನ್ನು ನಡೆಸುತ್ತಿದ್ದಾರೆ.

ಆ) ಸರ್ಕಾರಿ ವಕೀಲರು ಸರಿಯಾಗಿ ಕೇಸುಗಳನ್ನು ನಡೆಸುತ್ತಿರುವುದರಿಂದ ಕೇಸುಗಳ ಮೌಲ್ಯಮಾಪನ ಮಾಡುವ ಪ್ರಶ್ನೆ ಉದ್ಭವಿಸುವಿದಿಲ್ಲ

ಪೋಲಿಸ್ ಠಾಣೆಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವುದು

418(668) ಶ್ರೀ ಭೀಮಾ ನಾಯ್ಕ ಎಸ್ (ಹಗರಿಬೊಮ್ಮನಹಳ್ಳಿ)

ಅ) ಹಗರಿಬೊಮ್ಮನಹಳ್ಳಿ ವಿಧನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಾದ ಕೊಟ್ಟೂರು ಪೊಲೀಸ್ ಠಾಣೆ ಮತ್ತು ಸಿಪಿಐ ಕಛೇರಿಯು ಸ್ವಂತ ಕಟ್ಟಡಗಳಿಲ್ಲದೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸ್ವಂತ ಕಟ್ಟಡಗಳನ್ನು ಕಟ್ಟಲು ಸರ್ಕಾರದ ಕ್ರಮ ಕೈಗೊಂಡಿರುವುದೇ ಹಗರಿಬೊಮ್ಮನಹಳ್ಳಿ ಪೊಲೀಸ್ ಠಾಣೆ ಕಟ್ಟಡ ಔಟ್ ಪೋಸ್ಟ್ ಕಟ್ಟಡ ಸಾಲದೆ ಈ ಠಾಣೆಗೆ ಹೊಸ ಕಟ್ಟಡ ನಿರ್ಮಾಣ ಮಾಡಬೇಕೆನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂಧಿದೆಯೇ,

ಇ) ಹಾಗಿದ್ದಲ್ಲಿ ಸರ್ಕಾರದ ಕೈಗೊಂಡ ಕ್ರಮವೇನು?

ಈ) 2013–14 ನೇ ಸಾಲಿನಲ್ಲಿ ಅನುದಾನ ಒದಗಿಸಿ ನಿರ್ಮಿಸಲು ಕಾರ್ಯಯೋಜನೆ ಇದೆಯೇ?